ಸರ್ಕಾರ ಚಳುವಳಿಯನ್ನು ದಮನ ಮಾಡತಕ್ಕಂಥ ಸರ್ವಾಧಿಕಾರಿ ಸರ್ಕಾರ ಮತ್ತು ನಂಜುಂಡಸ್ವಾಮಿಯವರ ಮತ್ತು ರೈತ ಸಂಘದ ಚಳುವಳಿಯನ್ನು ತುಳಿಯಬೇಕು ಎಂದು ಈ ಸರ್ಕಾರಕ್ಕೆ ಏನು ಉದ್ದೇಶ ಇದೆ ಈ ನೀತಿಯನ್ನು ನಾವು ವಿರೋಧಿಸುತ್ತೇವೆ. ಇವರ ಸರ್ವಾಧಿಕಾರಿ ಸರ್ಕಾರವನ್ನು ನಾವು ವಿರೋಧಿಸುತ್ತೇವೆ. ನಾನು ಮತ್ತು ರೈತ ಸಂಘದವರು ಇಲ್ಲಿ ಧರಣಿ ಮಾಡುತ್ತೇವೆ. ಇವರ ಹೇಳಿಕೆ ಬಹಳ ಅಪ್ರಾಮಾಣಿಕವಾಗಿದೆ. ಪ್ರಾಮಾಣಿಕತೆ ಇಲ್ಲ. ಇದು ರಾಜ್ಯದ ರೈತರನ್ನು ಮತ್ತು ಬಹುರಾಷ್ಟ್ರೀಯ ಕಂಪನಿಗಳು ನಮ್ಮನ್ನು ಆಳತಕ್ಕಂಥ ಮತ್ತು ಅತ್ಯಂತ ಘೋರ ಅಪರಾಧವನ್ನು ರಾಜ್ಯ ಮತ್ತು ದೇಶದವರು ಏನು ಮಾಡುತ್ತಿದ್ದಾರೆ ಇದು ಸರಿಯಲ್ಲ. ಈ ಚಳುವಳಿಯ ಸ್ವರೂಪ ಶಾಂತವಾಗಿ ಇರಬಹುದು ಸ್ವಲ್ಪ ಹೋರಾಟದ ದಿಕ್ಕು ಹಿಡಿದಿರಬಹುದು ಚಳುವಳಿ ದೊಪ ಬೇರೆ ಇರಬಹುದು ಆ ಚಳುವಳಿಗೆ ನಮ್ಮ ಬೆಂಬಲ ಇದೆ. ಆ ಚಳುವಳಿಯನ್ನು ನೀವು ಎಷ್ಟು ದಮನ ಮಾಡುತ್ತೇವೆಂದು ಹೇಳಿದರು ಚಳುವಳಿ ನಿಲ್ಲುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿ ನಂಜುಂಡಸ್ವಾಮಿಯವರ ಮೇಲೆ ಹಾಕಿರತಕ್ಕಂಥ ಕೇಸು ಇದು ಸತ್ಯಕ್ಕೆ ದೂರವಾದುದು ಅಪ್ರಾಮಾಣಿಕವಾದುದು, ಕೇಸ್ ಹಾಕಿರತಕ್ಕಂಥದ್ದು ಸರಿಯಲ್ಲ ಎಂದು ಹೇಳಿ ನಾವು ಧರಣಿ ಮಾಡುತ್ತೇವೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತರು)

+ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಇಲ್ಲಿ ಇವತ್ತು ಮಾಡಿದಂತಹ ಡಿಬೇಟ್ ಬಗ್ಗೆ ನಾನು ದೊಡ್ಡ ವ್ಯಾಖ್ಯಾನ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಸನ್ಮಾನ್ಯ ಗೃಹ ಮಂತ್ರಿಗಳು ಹೇಳಿದರು. ಪ್ರಚೋದನೆ ಮಾಡುವವರನ್ನು ನಾವು ಕಾನೂನಿನ ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ ಅಂತ ಹೇಳಿ ಮಾನ್ಯ ಮುಖ್ಯಮಂತ್ರಿಗಳು ಪ್ರಚೋದನೆ ಮಾಡಿದ್ದಾರೆ. ನನ್ನ ಕಡೆಯ ಜನರು ನಿಮ್ಮನ್ನು ನೋಡಿಕೊಳ್ಳುತ್ತೇನೆಂದು ಹೇಳುವುದು ಪ್ರಚೋದನೆಯ ವಿಚಾರ. ಅದ್ದರಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ಮೈಸೂರಿನಲ್ಲಿ ನಡೆದಂತಹ ಘಟನೆ ಬಗ್ಗೆ 19ನೇ ತಾರೀಖು, ನಾವು ಚಳುವಳಿ ಪ್ರತಿಭಟನಾ ಸಭೆ ಮಾಡುವುದಕ್ಕೆ ಬಂದಾಗ ಇಡೀ ಮೈಸೂರು ಜಿಲ್ಲೆ ಪೋಲೀಸ್‌ರವರ ಜಿಲ್ಲೆ ಆಗಿತ್ತು. ಪೋಲೀಸ್‌ರವರು ಸುತ್ತಮುತ್ತ ನಿಂತು ಯಾರು ಹಸಿರು ಟವಲ್ ಹಾಕಿಕೊಂಡಿದ್ದಾರೆ ಅವರನ್ನು ಇಳಿಸಿದರು ಯಾರು ಹೆಂಗಸರು ಹಸಿರು ಸೀರೆ ಉಟ್ಟುಕೊಂಡಿದ್ದರು ಅವರನ್ನೂ ಇಳಿಸಿದರು. ದಸ್ತಗಿರಿ ಮಾಡುವುದು ಬಸ್ಸಿನಲ್ಲಿ ಕೂರಿಸುವುದು, 19ನೇ ತಾರೀಖು ನಡೆದಂತಹ ಘಟನೆ. ಆ ದಿನ ನನ್ನನ್ನು ಒಬ್ಬ ಎಸ್.ಐ. ದರ್ಮೇ ಎನ್ನತಕ್ಕಂಥವರು ನಿಮ್ಮನ್ನು ನಾನು ಒಳಗಡೆ ಬಿದುವುದಿಲ್ಲ ಅಂತ ಹೇಳಿ ನನ್ನ ಕಾರು ತಡೆಹಾಕಿದರು. ಈ ತರಹ ಪೋಲೀಸ್ ಸಾಮ್ರಾಜ್ಯ ರಚನೆ ಮಾಡಿ ಸರ್ವಾಧಿಕಾರಿ ಪ್ರದರ್ಶನ ಅವತ್ತು ನಡೆಯಿತು. ಇಡೀ ಮೈಸೂರು ನಗರ ಅವತ್ತು ಪೋಲೀಸ್‌ರಿಂದ ತುಂಬಿತ್ತು. ಯಾವ ಕಾರಣಕ್ಕೋ ಗೊತ್ತಿಲ್ಲ. ಸನ್ಮಾನ್ಯ ಸಭಾನಾಯಕರು ಹೇಳಿದರು ಮೈಸೂರಿನಲ್ಲಿ ಯಾರ್ಯಾರು ಇದ್ದಾರೆ ಅವರನ್ನೆಲ್ಲಾ ದಸ್ತಗಿರಿ ಮಾಡಿದ್ದೇವೆಂದು ಹೇಳಿದರು. ಸೆಕ್ಷನ್ 143 - 147, 341, 323 ಸೆಕ್ಷನ್ 506ಬಿ 392, 324, 149 ಐ ಪಿಸಿ ಇದರಲ್ಲಿ ಬಹಳ ಮುಖ್ಯವಾದಂತಹ ವ್ಯಕ್ತಿಗಳು ಇವತ್ತಿನ ಮೇಯರ್ ಮಣಿರಾಜು ಬನ್ನೂರು ಕುಮಾರ್ ಬಲರಾಮ್ ಶಿವಕುಮಾರ್, ಸೋಮಶೇಖರ್ ವಾಸು, ರವಿ ಇವತ್ತು ಇವರು ಹಾರಿ ಕಾರ್ಪೊರೇಟರ್‌ಗಳು ಮತ್ತು ಮೇಯರ್ ಆಗಿದ್ದಾರೆ. ಅವರ ಮೇಲೆ ಕಾನೂನು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದಿರಿ.

ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಆದರೆ ಇದುವರೆಗೂ ದಸ್ತಗಿರಿ ಮಾಡಿಲ್ಲ, ಏನೂ ಮಾಡಿಲ್ಲ ಸರ್ವಾಧಿಕಾರಿ ಧೋರಣೆಯನ್ನು ತೋರಿಸಿ ಉದ್ದೇಶಪೂರ್ವಕವಾಗಿ ಮಾಡಿದ್ದೀರಿ. ನಾನೇನು ರೈತರ ಮೇಲೆ ಕ್ರಮ ತೆಗೆದುಕೊಳ್ಳಬೇಡಿ ಅಂತ ಹೇಳಿಲ್ಲ.

ರೈತ ಸಂಘದ ಕಾರ್ಯಕರ್ತರ ಮೇಲೆ ನೂರ ಒಂದು ಜನರ ಮೇಲೆ, ಕ್ರಮ ತೆಗೆದುಕೊಳ್ಳಬೇಡಿ ಅಂತ ಹೇಳಿಲ್ಲ. ಅವರೇ ಹೇಳಿದರು ತತಕ್ಷಣ ಅರೆಸ್ಟ್ ಮಾಡಿದರು ಅಂತ. ಏನು ಕಿಂಟಕಿ ಚಿಕನ್ ಮೇಲೆ ನಡೆದಂತಹ ವಿಚಾರಕ್ಕೂ ಅವರನ್ನು ದಸ್ತಿಗಿರಿ ಮಾಡಿದ್ದಕ್ಕೂ ಕೇವಲ 5-10 ನಿಮಿಷ ವ್ಯತ್ಯಾಸ. ಯಾವುದನ್ನು ದರೋಡೆ ಮಾಡಿದ್ದಾರೆ. ಯಾವ ಪದಾರ್ಥಗಳನ್ನು ದರೋಡೆ ಮಾಡಿರತಕ್ಕಂಥಾದ್ದನ್ನು ರೈತ ಸಂಘದ ಕಾರ್ಯಕರ್ತರಿಂದ ವಶ ಮಾಡಿಕೊಂಡಿದ್ದಾರೆ. ಇದು ಶುದ್ಧ ಸುಳ್ಳು. ದರೋಡೆ ಕೇಸ್ ಹಾಕಿರುವುದು ಶುದ್ಧ ಸುಳ್ಳು. ಅವರ ಮೇಲೆ ಹೊರಿಸಿರತಕ್ಕಂಥಾದ್ದು ಸೆಕ್ಷನ್ 307. ಒಬ್ಬ ವ್ಯಕ್ತಿಗೆ ನಡ ನೋವಿನಿಂದ ನಡೆಯಲಿಕ್ಕೆ ಆಗದೇ ಇರತಕ್ಕಂಥವನಿಗೆ ಕೋಲು ಕೊಟ್ಟುಹೊರಗಡೆ ಕರೆದುಕೊಂಡು ಬಿಟ್ಟಿರತಕ್ಕಂಥಾದ್ದು ಇನ್ಸಿಡೆಂಟ್ಸ್ ಎಲ್ಲ ವೀಡಿಯೋ ಕ್ಯಾಸೆಟ್ ಆಗಿದೆ ಅದನ್ನು ತಾವು ವೀಕ್ಷಣೆ ಮಾಡಬಹುದು. ಇಷ್ಟೆಲ್ಲಾ ಆಗಿದ್ದರು ಚಳುವಳಿಯನ್ನು ಉದ್ದೇಶಪೂರ್ವಕವಾಗಿಯೇ ಸರ್ವಾಧಿಕಾರಿ ಪ್ರವೃತ್ತಿಯಿಂದ ದಮನಮಾಡತಕ್ಕಂಥ ಈ ಸರ್ಕಾರದ ವಿರುದ್ಧ ನಾನು ಸಭ ಧರಣಿ ಕುಳಿತುಕೊಳ್ಳುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಧರಣಿ ಕುಳಿತರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ನಂಜುಂಡಸ್ವಾಮಿಯವರು ಮಾಡಿರತಕ್ಕಂಥ ಹೋರಾಟದ ಸ್ವರೂಪವನ್ನು ನಾನೂ ಕೂಡಾ ಒಪ್ಪುವುದಿಲ್ಲ. ಆದರೆ, ಅವರ ಮೇಲೆ ಸಕ್ಷನ್ 307ರ ಮೇಲೆ ಕೇಸ್ ಹಾಕಿರತಕ್ಕಂಥಾದ್ದು ಮಾತ್ರ ಸರಿಯಲ್ಲ. ಸೆಕ್ಷನ್ 307 ಹಾಕಬೇಕಾದರೆ ಬೇಸಿಕ್ ಇನ್‌ಗ್ರೇಡಿಯೆಂಟ್ಸ್ ಏನು? ಕಾನೂನು ಪ್ರಕಾರ ಮಾತನಾಡುವುದಾದರೂ, ಮಾನ್ಯ ನಂಜುಂಡಸ್ವಾಮಿಯವರು ಆ ಜಾಗದಲ್ಲಿ ಇರಲಿಲ್ಲ. ಪ್ರಚೋದನೆ ಮಾಡಿದ್ದಾರೆ ಅದಕ್ಕಾಗಿ ಬೇರೆ ಸಕ್ಷನ್ ಮೇಲೆ ಕೇಸ್ ಹಾಕಬಹುದಾಗಿತ್ತು. ಸಕ್ಷನ್ 307 ಹಾಕಿರುವುದಕ್ಕೆ ಸಮರ್ಥನೆ ಮಾಡುವುದು ಸರಿಯಲ್ಲ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಸಭಾಧ್ಯಕ್ಷರೆ, ಇದೇ ವಿಷಯದ ಮೇಲೆ ಚರ್ಚೆ ಮಾಡಲು ನಾವೂ ಕೂಡ ನಿಯಮ 69ರ ಮೇಲೆ ಸೂಚನಾ ಪತ್ರವನ್ನು ಕಳುಹಿಸಿದ್ದೆವು. ಆದರೆ, ಇದರ ಬಗ್ಗೆ ಬಹುತೇಕ ಚರ್ಚೆಯಾಗಿರುವುದರಿಂದ ಅದಕ್ಕೆ ಸರ್ಕಾರ ಉತ್ತರ ಕೂಡ ಕೊಟ್ಟಿದೆ. ಸರ್ಕಾರ ಕೊಟ್ಟಿರುವ ಉತ್ತರ ಮತ್ತು ನಡೆದಂಥ ಘಟನೆಗೆ ತುಂಬಾ ವ್ಯತ್ಯಾಸವಿದೆ. ಅದಕ್ಕಾಗಿ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳು ರಾಜ್ಯದಲ್ಲಿ ಪ್ರವೇಶ ಮಾಡುತ್ತಿರುವುದರ ಬಗ್ಗೆ ವಿರೋಧಿಸುವುದರ ಜೊತೆಗೆ ವಿರೋಧ ಪಕ್ಷಗಳು ಮತ್ತು ಸಂಘ ಸಂಸ್ಥೆಗಳು ಬಹುರಾಷ್ಟ್ರೀಯ ಸಂಸ್ಥೆಗಳ ವಿರುದ್ಧ ಮಾಡತಕ್ಕಂಥ ಹೋರಾಟವನ್ನು ದಮನ ಮಾಡತಕ್ಕಂಥ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಡಿ. ದೇವೇಗೌಡ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಸದಸ್ಯರು ಮಾತನಾಡುವಾಗ ಸುಳ್ಳು ಆರೋಪವನ್ನು ಮಾಡಲಾಗಿದೆಯೆಂದು ಹೇಳಿರುವುದರಿಂದ ಅದಕ್ಕಾಗಿ ನಾನು ಕ್ಲಾರಿಫಿಕೇಷನ್ ಕೊಡುತ್ತೇನೆ. ಯಾವ ಸೆಕ್ಷನ್ ಮೇಲೆ ಪೋಲೀಸ್ ಅಧಿಕಾರಿಗಳು ಕೇಸ್ ಹಾಕಿದ್ದಾರೋ ಅದಕ್ಕೆ ನನಗೆ ಸಂಬಂಧವಿಲ್ಲ. ಪೋಲೀಸ್ ಅಧಿಕಾರಿಗಳ ಹತ್ತಿರ ಏನೇನು ಎವಿಡೆನ್ಸ್ ಇದೆಯೋ ಅದರ ಮೇಲೆ ಅವರು ತನಿಖೆ ಮಾಡಿ ಕೋರ್ಟ್‌ಗೆ ಚಾರ್ಜ್‌ಶೀಟ್ ಕೊಡುವವರಿದ್ದಾರೆ. ಮೈಸೂರಿನಲ್ಲಿ ನಡೆದಂಥ ಘಟನೆ ಬಗ್ಗೆ ಮಾನ್ಯ ಸದಸ್ಯರು ಸೆಕ್ಷನ್ಸ್ ಎಲ್ಲಾ ಓದಿದರು. ಅದು ಕೂಡಾ ನನಗೆ ಸಂಬಂಧವಿಲ್ಲ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಸರ್ವಾಧಿಕಾರಿ ಸರ್ಕಾರವನ್ನು ಯಾರೂ ಮಾಡುವುದಕ್ಕಾಗುವುದಿಲ್ಲ. ಜನತಂತ್ರ ವ್ಯವಸ್ಥೆಯಲ್ಲಿ ಯಾರೂ ಸರ್ವಾಧಿಕಾರಿಗಳಾಗುವುದಕ್ಕೆ ಸಾಧ್ಯವಿಲ್ಲ. ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು